ನಾನಂದುಕೊಂಡಿದ್ದೆ ತಪ್ಪಾಗಿತ್ತು. ನಿಜಕ್ಕೂ ಮಗುವನ್ನು ಎತ್ತಿ ಎಸೆಯಲು ಸಿದ್ಧಳಾಗಿದ್ದಳು. ಒಂದೇ ಒಂದು ಕ್ಷಣ ತಡೆಯುವುದು ತಡವಾಗಿದ್ದರೆ ನನ್ನ ಮಗಳನ್ನು ಕಳೆದುಕೊಳ್ತಾ ಇದ್ದೆ..." ನೆನಪಿನಿಂದಲೇ ಅವನ ಮುಖದಲ್ಲಿ ಬೆವರು ಮೂಡಿತ್ತು. ಕಣ್ಣುಗಳಲ್ಲಿ ಗಾಬರಿ ಕಾಣಿಸಿಕೊಂಡಿತ್ತು.

"ಮಧ್ಯರಾತ್ರಿಯಲ್ಲಿ 'ರೀ ನಂಗೇನೋ ಆಗ್ತಾಯಿದೆ. ಏನೂಂತ ಹೇಳೋಕ್ಕಾಗೊಲ್ಲಾ ರಿ...' ಎಂದು ನನ್ನ ಪಕ್ಕದಿಂದ ಎದ್ದು ಅಂಗಳದಲ್ಲಿ ಕುಳಿತು ಅಳಲು ಪ್ರಾರಂಭಿಸಿಬಿಡುತ್ತಾಳೆ... ಒಮ್ಮೊಮ್ಮೆ ವಿನಾಕಾರಣ ಯಾವುದಕ್ಕೊ ಹೆದರಿದವಳಂತೆ ಮಂಕಾಗಿ ಕುಳಿತುಬಿಡುತ್ತಾಳೆ ಗಂಟೆಗಳ ದಿನಗಳ ಪರಿವೇ ಇಲ್ಲದೇ ಕುಳಿತೇ ಇರುತ್ತಾಳೆ..."

"ಯಾಕೆ ಹೆದರಿಕೇಂತಾ ಹೇಳ್ತಾಳೆಯೆ?"

"ಊಹೂಂ... ಕನಸುಗಳು ಜಾಸ್ತೀಂತ ಯಾವಾಗಲೋ ಒಂದುಬಾರಿ ಹೇಳಿದ್ದಳು... ಅಮಾವಾಸ್ಯೆ ದಿನ ಬಂದರಂತೂ ಅವಳು... ನನಗೆ ನನ್ನ ಹೆಂಡತಿ ಗೀತಾಂತ ಅನ್ನಿಸೋದೇ ಇಲ್ಲ... ಒಂದು ಬಗೆಯ ವಿಚಿತ್ರ ವರ್ತನೆಯಿಂದ ವಿಕೃತವಾಗಿ ವರ್ತಿಸುತ್ತಾಳೆ... ಭೂತ ಚೇಷ್ಟೇಂತ ಯಾರೋ ಹೇಳಿದರು. ಅದೂ ಮುಗಿಯಿತು. ಏನೂ ಪ್ರಯೋಜನವಾಗಲಿಲ್ಲ. ಮೈತುಂಬಾ ಬೂದಿ ಹಚ್ಚಿಸಿ, ಕುತ್ತಿಗೆ ತುಂಬಾ ಯಂತ್ರಗಳನ್ನು ಕಟ್ಟಿದ್ದಷ್ಟೇ ಲಾಭ. ನಂತರ ಯಾರೋ ಈ ಜಾಗಕ್ಕೆ ಕಾಗದ ಬರೆದು ಕಳುಹಿಸಿದರು..."

ಭಾವೋದ್ವೇಗದಿಂದ ಹೇಳುತ್ತಿದ್ದ ದಿವಾಕರನ ಮುಖ ಕೆಂಪಾಗಿತ್ತು. ಅವ್ಯಕ್ತ ನೋವಿನಿಂದ ಅವನ ಕಣ್ಣುಗಳಲ್ಲಿ ಕಂಡೂ ಕಾಣದಂತೆ ನೀರಿನ ಪಸೆ ಕಾಣಿಸಿಕೊಂಡಿತ್ತು.

ಎಲ್ಲವನ್ನೂ ಕೇಳಿ, ಗುರುತು ಹಾಕಿಕೊಂಡು, ಕೇಸ್ ಪೇಪರಿನಲ್ಲಿದ್ದುದಕ್ಕೆ ಹೋಲಿಸಿ ನೋಡಿದ ವಿಜಯಾ, "ನೀವು ಧೈರ್ಯವಾಗಿರ್‍ರಿ... ಯಾವುದೋ ಅವ್ಯಕ್ತ ಭೀತಿ ಅವರಿಗೆ ಆವರಿಸಿಕೊಂಡಿದೆ... ಅದನ್ನು ಜಾಗೃತ ಮನಸ್ಸಿನಲ್ಲಿದ್ದಾಗ ಅವರು ಹೇಳಲು ತಯಾರಿಲ್ಲ. ಅದಕ್ಕಾಗಿಯೇ ಈ ಚಿಕಿತ್ಸೆ. ಈ ದಿನ ಮಾಡ್ತಾ ಇದ್ದೇವೆ. ನೀವು ಗಾಬರಿಯಾಗುವ ಅವಶ್ಯಕತೆಯೇ ಇಲ್ಲ... ನೀವು ಹೊರಗಡೆ ಕುಳಿತಿರಿ. ನಾನೇ ನಿಮ್ಮನ್ನು ಕರೆಯುತ್ತೇನೆ" ಎಂದ ವಿಜಯಾ ದಿವಾಕರನನ್ನು ರೂಮಿನಿಂದ ಹೊರಗೆ ಕಳುಹಿಸಿ, ಗೀತಾಳನ್ನು ಮಲಗಿಸಿದ್ದ ಒಳಗಿನ ಕೊಠಡಿಗೆ ಕೇಸ್ ಪೇಪರುಗಳೊಂದಿಗೆ ಹೋದಳು.

ಸಾಲಾಗಿ ಬೆಂಚಿನ ಮೇಲೆ ಆಗಲೇ ಬಂದು ಕುಳಿತುಕೊಳ್ಳತೊಡಗಿದ್ದ ರೋಗಿಗಳತ್ತ ಒಮ್ಮೆ ನೋಡಿದ ವಿಜಯಾ, "ಸಿಸ್ಟರ್... ಡಾಕ್ಟರ್ ವಾಸುಗೆ ಹಿಸ್ಟರಿ ತೆಗೆದುಕೊಳ್ಳಲು ಹೇಳಿ... ನಾರ್‍ಕೋ ಮುಗಿಸಿ ಪ್ರೊಫೆಸರ್ ಬರ್ತಾರೆ" ಎನ್ನುತ್ತಾ ರೂಮಿನ ಬಾಗಿಲು ಹಾಕಿಕೊಂಡಳು.

ಅವಳಿಗಿಂತ ಮೊದಲೇ ಪ್ರೊಫೆಸರ್ ರಾವ್ ಬಂದಿದ್ದರು. ಮಲಗಿದ್ದ ಗೀತಾಳ ರಕ್ತನಾಳಕ್ಕೆ ಪೆಂಟಥಾಲ್ ಸೋಡಿಯಂ ಇಂಜೆಕ್ಷನ್ನನ್ನು ನಿಧಾನವಾಗಿ ನೀಡತೊಡಗಿದ್ದರು. ರೂಮಿನಲ್ಲಿ ಪ್ರೊಫೆಸರ್ ರಾವ್ ಮತ್ತು ವಿಜಯಾ ಮಾತ್ರ ಇದ್ದರು.

ಗೀತಾ ಹೆದರಿಕೆಯಿಂದ ಕಣ್ಣುಗಳನ್ನು ಅರಳಿಸಿ ನೋಡಿದಳು. ಹಿಂಜರಿಕೆ, ಭಯದಿಂದ ಇಡೀ ಮೈಯನ್ನು ಬಿಗಿಯಾಗಿ ಮುದುಡಿಕೊಂಡಳು.

"ಹಾಗೆ ಮಾಡ್ಬೇಡಿ... ಆರಾಮವಾಗಿ ಮಲಗಿಕೊಳ್ಳಿ... ನಿಮಗೆ ಏನೂ ಮಾಡೋಲ್ಲ. ನೀವೀಗ ಕಣ್ಣುಮುಚ್ಚಿ ಆರಾಮವಾಗಿ ಮಲಗಿಬಿಡಿ... ತಿಳಿಯಿತಾ?"

"ಹೂಂ..."

"ಎಲ್ಲಿ... ಒಂದು. ಎರಡು. ಮೂರೂಂತ ಮಗ್ಗಿ ಹೇಳ್ತಾ ಹೋಗಿ..."

ರಾವ್ ಔಷಧಿಯನ್ನು ನಿಧಾನವಾಗಿ ತಳ್ಳುತ್ತಾ ಹೇಳಿದರು. ಔಷಧಿ ಹಂತ ಹಂತವಾಗಿ